



# ತಿರುಗಾಟಕ್ಕೆ ತಯಾರಿದ್ದೀರಾ?

**ವರ್ಷಾಂತ್ಯ ಬಹುತೇಕ ಜನರಿಗೆ ತಿರುಗಾಟಕ್ಕೆ ಅತ್ಯಂತ ಪ್ರಿಯವಾದ ಅವಧಿ. ಸಾಲು ಸಾಲು ರಜೆಗಳು, ಎಲ್‌ಟಿಎ ಸೌಲಭ್ಯ, ಮಕ್ಕಳಿಗೆ ರಜೆ, ಸುಖಮಯ ಹವಾಮಾನ– ಹೀಗೆ ರಜೆ ಹೋಗುವವರಿಗೆ ಹತ್ತಾರು ಕಾರಣಗಳಿವೆ.**

ಚಿತ್ರ– ಲೇಖನ: **ನೆಂಪು ಗುರು**

ಅಬ್ಬಾ! ನಿಜಕ್ಕೂ ನಮ್ಮ ದೇಶ ಹಲವು ಅಚ್ಚರಿಗಳ ತಾಣ. ಅದಕ್ಕಾಗಿಯೇ ಸಹಸ್ರಾರು ವರ್ಷಗಳಿಂದ ಪಾಶ್ಚಿಮಾತ್ಯರು, ಪರ್ಷಿಯನ್ನರು, ಯುರೋಪಿಯನ್ನರು, ಇನ್ನಿತರ ವಿದೇಶಿಯರು ಭಾರತ ಪ್ರವಾಸ ಮಾಡುತ್ತಲೇ ಬಂದಿದ್ದಾರೆ, ಈಗಲೂ ಬರುತ್ತಿದ್ದಾರೆ. ನಾನು ಪ್ರವಾಸ ಹೋದ ಸ್ಥಳಗಳಲ್ಲಿ ಸಿಕ್ಕ ವಿದೇಶಿಗರನ್ನು ಮಾತನಾಡಿಸಿದಾಗ ತಿಳಿದದ್ದು 'ಹೆಚ್ಚಿನ ವಿದೇಶಿಯರಿಗೆ ನಮ್ಮ ದೇಶದ ಬಗ್ಗೆ, ಇಲ್ಲಿಯ ಸಂಸ್ಕೃತಿಯ ಬಗ್ಗೆ ಸಾಕಷ್ಟು ಅರಿವಿದೆ. ಹಾಗೆಯೇ ನಮಗೇ ತಿಳಿದಿರದ, ಅಷ್ಟೇನೂ ಮಹತ್ವದ್ದಲ್ಲ ಎಂದು ಭಾವಿಸಿರುವ ಸ್ಥಳಗಳ ಮಹತ್ವ ನಮಗಿಂತ ಅವರಿಗೇ ಹೆಚ್ಚು ಗೊತ್ತಿದೆ' ಎಂದು.

## ಪೂರ್ವ ತಯಾರಿ

ಪ್ರವಾಸ ಪ್ರಯಾಸವಾಗಬಾರದು. ಹಾಗಾಗಿ ಯಾವುದೇ ಪ್ರಯಾಣ ಹೋಗುವಾಗಲು ಪೂರ್ವ ತಯಾರಿ ಮುಖ್ಯ. ತಿಂಗಳ ಮುಂಚೆಯಿಂದಲೇ ತಯಾರಿಯಲ್ಲಿ ತೊಡಗಿದ್ದರೆ ಕೊನೆ ಕ್ಷಣದ ಗಡಿಬಿಡಿ ತಪ್ಪಿಸಬಹುದು. ಹಾಗಂತ ಇದು ಎಲ್ಲಾ ಸಮಯದಲ್ಲಿ ಸಾಧ್ಯವಾಗುವುದಿಲ್ಲ, ಅನಿರೀಕ್ಷಿತವಾಗಿಯೂ ಪ್ರವಾಸದ ಭಾಗ್ಯ ಬರುವುದೂ ಇರುತ್ತದೆ. ಇಂಥ ಸಮಯದಲ್ಲಿ ಮೊದಲು ಪ್ರವಾಸ ಹೋದ ಅನುಭವಗಳು ಸಹಾಯಕ್ಕೆ ಬರುತ್ತವೆ. ಕೆಲವೊಮ್ಮೆ ರಜೆ ಹೊಂದಾಣಿಕೆಯ ಸಮಸ್ಯೆಯಿಂದ ತಿಂಗಳ ಮುಂಚೆ ಮಾಡಿದ ಯೋಜನೆ ಕೊನೆ ಕ್ಷಣದಲ್ಲಿ ರದ್ದಾಗುವುದೂ ಇದೆ.

ಹೆಚ್ಚಿನವರ ಬಳಿ ವೀಕ್ಷಿಸಲೇಬೇಕಾದ ತಾಣಗಳ ಉದ್ದದ ಪಟ್ಟಿ ಇರುತ್ತದೆ. ಬಹು ವರ್ಷಗಳಿಂದ ವೀಕ್ಷಿಸುವ ಗುರಿ ಇಟ್ಟುಕೊಂಡ ಪ್ರವಾಸ ಸಾಕಾರವಾದಲ್ಲಿ ಮುಂದಿನ ಕೆಲಸ–ಕಾರ್ಯಗಳಿಗೆ, ವ್ಯವಹಾರಗಳಿಗೆ ಹೊಸ ಉತ್ತೇಜನ, ಹುರುಪು ಬರುತ್ತದೆ. ಸಾಮಾನ್ಯವಾಗಿ ದೇಶೀಯ ಅಥವಾ ವಿದೇಶದ ತಾಣಗಳಿಂದ ಕೂಡಿದ ಪಟ್ಟಿ ತುಂಬ ದೊಡ್ಡದಿರುತ್ತದೆ.

## ಸಂಚಾರ ಮಾರ್ಗಗಳು

ಮಾಹಿತಿ ತಂತ್ರಜ್ಞಾನದ ಆವಿಷ್ಕಾರದಿಂದಾಗಿ ಯಾವುದೇ ಸ್ಥಳಗಳ ಬಗ್ಗೆ ತಿಳಿಯುವುದು ಈಗ ತುಂಬ ಸುಲಭ. ತಲುಪುವ ಮಾರ್ಗ, ಅಲ್ಲಿನ ಹವಾಮಾನ, ಸೂಕ್ತ ಸಮಯ, ವಸತಿ, ಊಟ ತಿಂಡಿಯ ವ್ಯವಸ್ಥೆ ಹೀಗೆ ಮಾಹಿತಿಯ ಭಂಡಾರವೇ ಅಂತರ್ಜಾಲದಲ್ಲಿ ಲಭ್ಯ. ಅದನ್ನು ಹುಡುಕಿ ನಮಗೆ ಬೇಕಾದ್ದನ್ನು ಬಗೆದು ತೆಗೆಯುವ ಕಲೆ ಗೊತ್ತಿರಬೇಕಷ್ಟೆ. ಈಗಾಗಲೇ ಪ್ರವಾಸ ಹೋಗಿ ಬಂದವರ ಅನುಭವ, ಮಾಹಿತಿ ಕೂಡಾ ಉಪಯೋಗಕ್ಕೆ ಬರುತ್ತದೆ.

'ಸೆಲ್ಫ್ ಡ್ರೈವ್' ವಿಧಾನ ಹಲವಾರು ಪಟ್ಟಣಗಳಲ್ಲಿ ಲಭ್ಯವಿರುವುದರಿಂದ ತಮ್ಮದೇ ಕಾರಿನಲ್ಲಿ, ಇಲ್ಲಾ ಬಾಡಿಗೆ ಕಾರಿನಲ್ಲಿ ಪ್ರಯಾಣಿಸಬೇಕೆಂಬ ನಿರ್ಬಂಧವೂ ಇಲ್ಲ. ದೂರದೂರಿಗೆ ಪ್ರಯಾಣ ಹೋಗುವಾಗ ವಿಮಾನವೋ, ರೈಲಲ್ಲೋ ಹತ್ತಿರದ ಪಟ್ಟಣ ತಲುಪಿ ಅಲ್ಲಿಂದ 'ಸೆಲ್ಫ್ ಡ್ರೈವ್' ವಾಹನವನ್ನು ಬಾಡಿಗೆಗೆ ಪಡೆದು ನಮ್ಮ ನೆಚ್ಚಿನ ತಾಣ ಸುತ್ತಾಡುವ ವ್ಯವಸ್ಥೆ ಪ್ರಸಿದ್ಧಿ ಪಡೆಯುತ್ತಿದೆ. ದಕ್ಷಿಣ ಭಾರತದಿಂದ ಉತ್ತರ ಭಾರತಕ್ಕೆ ಪ್ರಯಾಣಿಸುವ ಹಲವರು ದೆಹಲಿಯೋ, ಚಂಡಿಘಡವನ್ನೋ ಕೇಂದ್ರವಾಗಿರಿಸಿ 'ಸೆಲ್ಫ್ ಡ್ರೈವ್' ವಿಧಾನದ ಮೂಲಕ ಹಿಮಾಚಲ, ಉತ್ತರಾಖಂಡದ ಹಲವಾರು ಸ್ಥಳಗಳನ್ನು 5–6 ದಿನದಲ್ಲಿ ಸುತ್ತಾಡಿ ಬರುತ್ತಾರೆ. ಸಮಯವೂ ಉಳಿಯಿತು, ದುಡ್ಡು ಕಮ್ಮಿ, ನಾವೇ ಡ್ರೈವ್ ಮಾಡಿ ಹೋಗಬೇಕೆಂಬ ಬಯಕೆಯೂ

